# ಏನ ಬೇಡಲಿ ನಿನ್ನ ಚಂಚಲ ಕಠಿಣನ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Note:** The wordings are as per Ref. 1. Singer has followed lyrics as in Ref. 1.
4. **Note:** The wordings in Ref. 2 are different and are given separately in yellow highlights.

ರಾಗ: ಶಂಕರಾಭರಣ ತಾಳ: ಆದಿ

ಏನ ಬೇಡಲಿ ಸ್ವಾಮಿ ನಿನ್ನ ॥ ಪ ॥

ಏನ ಬೇಡಲಿ ನಿನ್ನ ಚಂಚಲ ಕಠಿಣನ
ಮೌನದಿಂದಲಿ ಮೋರೆ ಓರೆ ಮಾಡುವನ ॥ ಅಪ ॥

ಕರುಳ ಹರಕನ ಬೇಡಲೇನು
ತಿರಿದು ತಿಂಬುವನ
ಕೊರಳಗೊಯ್ಯ ಅರಣ್ಯ ತಿರುಗುವವ
ತಿರುಗಿ ಬೆಣ್ಣೆ ಕದ್ದು ತಿಂಬುವನ ॥ ೧ ॥

ವಾಸ ಶೂನ್ಯನ ಕೈಯ್ಯ ಕತ್ತಿ
ಬೀಸಿ ಸವರುವನ
ಕಾಸು ವೀಸವನೆಲ್ಲ ಮೀಸಲು ಮಾಡಿಟ್ಟು
ಕೇಸಕ್ಕಿ ಉಂಡುಂಡು ವಾಸ ಮಾಡುವನ ॥ ೨ ॥

ಬೇಡಿದರೆ ನೀಡಿ ಅವರ ಮೋರೆ
ಬಿಡೆಯವನು ನೋಡಿ
ಬಡವರ ಕರೆತಂದು ಅಡಿಗೆ ಸೇರಿಸಿಕೊಂಡ
ಒಡೆಯ ಶ್ರೀ ಪುರಂದರ ವಿಠಲ ದೊರೆಯೆ ॥ ೩ ॥

**Note:** The lyrics given below in yellow highlights are as per Ref. 2 above.

ರಾಗ: ಶಂಕರಾಭರಣ ತಾಳ: ಅಟ್ಟ

ಏನ ಬೇಡಲಿ ಹರಿಯ ॥ ಪ ॥

ಜಾನ್ಹವಿ ಜನಕನ ಕಂದರ್ಪನಯ್ಯನ ॥ ಅಪ ॥

ಏನ ಬೇಡಲಿ ಚಿತ್ತ ಚಂಚಲನ ಕಠಿಣನ
ಮೌನದಿಂದಲಿ ಧರೆ ಕೋರೆಲೆತ್ತಿದನ ಇಂಥವನ ॥ ೧ ॥

ಕರುಳ ಹಾರದವನ ಧರಣಿಯನ್ನು ಮೆಟ್ಟಿ
ಈರಡಿ ಮಾಡಿದ ಕೊಲೆಗಡುಕನ ಇಂಥವನ ॥ ೨ ॥

ಅರಣ್ಯದಿ ಚರಿಸಿ ಸತಿಯ ಕಳೆದನ
ತಿರುಗಿ ಮನೆ ಮನೆಯ ಬೆಣ್ಣೆ ಮೆಲ್ಲುವನ ಇಂಥವನ ॥ ೩ ॥

ವಸನ ಶೂನ್ಯನಾಗಿ ಕಲ್ಕಿ ಏರಿದನ
ಕಾಸು ಕಟ್ಟಿಟ್ಟು ಕೇಸಕ್ಕಿ ಉಂಬುವನ ಇಂಥವನ ॥ ೪ ॥

ಹಯವ ಪಿಡಿದು ಗಾಡಿಗಾರನಾಗಿಪ್ಪನ
ಭಯದಿಂದ ಬಲಿಯ ಬಾಗಿಲ ಕಾಯಿದವನ ಇಂಥವನ ॥ ೫ ॥

ಪುರವ ಜರಾಸಂಧನಿಗಂಜಿ ಬಿಟ್ಟವನ
ನೆರೆ ಸಾಧಿಸಿ ಮಾವನ ಶಿರವ ತರಿದನ ಇಂಥವನ ॥ ೬ ॥

ಜಗನ್ನಾಥ ಪುರಂದರ ವಿಠ್ಠಲ ರಾಯನ
ಭಕುತರಿಗೆ ಚತುರ್ಮುಕ್ತಿ ಕೊಡುವನ ಇಂಥವನ ॥ ೭ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇದೊಂದು ಅಣಕವಾಡು. ನಿನ್ನನ್ನು ನಾನು ಏನು ಬೇಡಲಿ ಎಂದು ಹೇಳುತ್ತಾ ದಶಾವತಾರದ ವೈಶಿಷ್ಟ್ಯಗಳನ್ನು ವರ್ಣಿಸಿದ್ದಾರೆ.

**ಚಂಚಲ** = ಮತ್ಸ್ಯಾವತಾರ

**ಕಠಿಣ** = ಕೂರ್ಮವಾತಾರ

**ಮೌನದಿಂದ ... ಒರೆ ಮಾಡುವನ** = ವರಾಹಾವತಾರ

**ಕರುಳ ಹರಕ** = ನರಸಿಂಹಾವತಾರ

**ತಿರಿದು ತಿಂಬವನ** = ವಾಮನಾವತಾರ

**ಕೊರಳಗೊಯ್ಯ** = ಪರಶುರಾಮಾವತಾರ

**ಅರಣ್ಯ ತಿರುಗುವನ** = ರಾಮಾವತಾರ

**ತಿರುಗಿ ತಿಂಬುವನ** = ಕೃಷ್ಣಾವತಾರ

**ವಾಸ ಶೂನ್ಯ** = ಬೌದ್ಧಾವತಾರ

**ಕೈಯ ಕಟ್ಟಿ .... ಸವರುವನ** = ಕಲ್ಕ್ಯಾವತಾರ

**ಕಾಸ .... ಮಾಡವನ** = ತಿರುಪತಿ ವೆಂಕಟೇಶ

**Classification:** Keerthane
**Ankita:** sri purandara vittala
**Location:** NA
**Category:** Dashavatara
**Sub-Category:** dashavatara, bhikshe, benne, badava, kaadu, kalla, aduge, Krishna, sita, chitta, bhumi, patni, rokka, kudure, bhaya, bagilu, bali, mukti, srinivasa, Tirupati,
**Pravachana:** NA
**Explanation:** NA